# ವಿಡಿಎನ್‌ಕೆಎಚ್‌ನಲ್ಲಿನ ರೊಸಾಟೋಮ್ ಪೆವಿಲಿಯನ್‌ಗೆ ಪ್ರಧಾನಮಂತ್ರಿ ಭೇಟಿ

ಜುಲೈ 09, 2024

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಇಂದು ಅಧ್ಯಕ್ಷರಾದ ಗೌರವಾನ್ವಿತ ಶ್ರೀ ವ್ಲಾದಿಮಿರ್ ಪುಟಿನ್ ಅವರೊಂದಿಗೆ ಮಾಸ್ಕೋದ ವಿಡಿಎನ್‌ಕೆಎಚ್‌ನಲ್ಲಿರುವ ಆಲ್ ರಷ್ಯನ್ ಎಕ್ಸಿಬಿಷನ್ ಸೆಂಟರ್, ಭೇಟಿ ನೀಡಿದರು.

2. ಉಭಯ ನಾಯಕರು ವಿಡಿಎನ್‌ಕೆಎಚ್‌ನಲ್ಲಿರುವ ರೊಸಾಟೋಮ್ ಪೆವಿಲಿಯನ್‌ನಲ್ಲಿ ಕೆಲಕಾಲ ಸುತ್ತಾಡಿದರು. 2023ರ ನವೆಂಬರ್‌ನಲ್ಲಿ ಉದ್ಘಾಟನೆಗೊಂಡ ರೊಸಾಟೋಮ್ ಪೆವಿಲಿಯನ್ ಎನ್ನುವುದು ವೈಜ್ಞಾನಿಕ ಮತ್ತು ತಂತ್ರಜ್ಞಾನ ಸಂಬಂಧಿ ಬೆಳವಣಿಗೆಗಳ ಇತಿಹಾಸಕ್ಕೆ ಸಂಬಂಧಿಸಿದ ಅತಿದೊಡ್ಡ ಪ್ರದರ್ಶನಗಳಲ್ಲಿ ಒಂದು. ಇಲ್ಲಿ ನಾಗರಿಕ ಪರಮಾಣು ಇಂಧನ ಕ್ಷೇತ್ರದಲ್ಲಿ ಭಾರತ-ರಷ್ಯಾ ಸಹಕಾರಕ್ಕೆಂದೇ ಸಮರ್ಪಿತವಾದ ಛಾಯಾಚಿತ್ರ ಪ್ರದರ್ಶನವನ್ನು ಪ್ರಧಾನಮಂತ್ರಿ ವೀಕ್ಷಿಸಿದರು. ಇದಲ್ಲದೇ, ಭಾರತದ ಕೂಡಂಕುಳಂ ಪರಮಾಣು ವಿದ್ಯುತ್ ಸ್ಥಾವರ(ಕೆಕೆಎನ್‌ಪಿಪಿ)ದ ಹೃದಯವಾಗಿರುವ ವಿವಿಇಆರ್-1000 ರಿಯಾಕ್ಟರ್‌ನ ಶಾಶ್ವತ ಕಾರ್ಯ ಮಾದರಿಯಾದ - "ಅಟೋಮಿಕ್ ಸಿಂಫನಿ"ಯನ್ನು ಪ್ರಧಾನಮಂತ್ರಿಗಳಿಗೆ ತೋರಿಸಲಾಯಿತು.

3. ಪೆವಿಲಿಯನ್‌ನಲ್ಲಿ, ಪ್ರಧಾನಮಂತ್ರಿ ಮೋದಿಯವರು ಭಾರತೀಯ ಮತ್ತು ರಷ್ಯಾದ ವಿದ್ಯಾರ್ಥಿಗಳ ಸಮೂಹದೊಂದಿಗೆ ಸಂವಾದವನ್ನೂ ನಡೆಸಿದರು. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿನ ಭವಿಷ್ಯದ ಸಾಧ್ಯತೆಗಳನ್ನು ಎದುರುನೋಡಿ ಮತ್ತು ಅವುಗಳನ್ನು ಭವಿಷ್ಯದ ತಲೆಮಾರುಗಳಿಗೆ ಮತ್ತು ಭೂಮಿಯ ಅನುಕೂಲತೆಗಾಗಿ ಬಳಸಿ ಎಂದು ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಿದರು.

**ಮಾಸ್ಕೋ**
**ಜುಲೈ 09, 2024**